ಕರ್ನಾಟಕ ಸರಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ,**

**ಆಯುಕ್ತರ ಕಛೇರಿ, ರೊದ್ದ ರಸ್ತೆ, ಧಾರವಾಡ-580 008**

ದೂರವಾಣಿ: 0836-2217066 ಫ್ಯಾಕ್ಸ್: 0836-2217067 ಈಮೇಲ್: cpidharwad@gmail.com

**************************************************************************

ಸಂಖ್ಯೆ: ಸಿ5/ಮುಶಿ/ವರ್ಗಾವಣೆ/ಘ.ಓ/32/2016-17 ದಿನಾಂಕ: 17 -09-2016

## ಜ್ಞಾಪನ

ವಿಷಯ : ಸರಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ಗ್ರುಪ್ ಬಿ ತತ್ಸಮಾನ ವೃಂದದ ಅಧಿಕಾರಿಗಳು ವರ್ಗಾವಣೆ ಕೌನ್ಸಿಲಿಂಗ್‌ಗೆ ಹಾಜರಾಗುವ ಕುರಿತು.

ಉಲ್ಲೇಖ : 1)ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಸಿ1(4)/ಸ.ಪ್ರೌ.ಮು.ಶಿ.ಸಾ/ವರ್ಗಾವಣೆ-26/2016-17 ದಿನಾಂಕ:02.08.2016
2)ಆಯುಕ್ತರು ಸಾ.ಶಿ. ಇಲಾಖೆ ಬೆಂಗಳೂರು ಇವರ ಪ್ರಕಟಣೆ ಸಂಖ್ಯೆ:ಸಿ1(4)/ಸಾ,ವ/26/ 2016-17 ದಿನಾಂಕ:14.09.2016.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲೇಖ (1) ರನ್ವಯ ಸರಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ಗ್ರುಪ್ ಬಿ ತತ್ಸಮಾನ ವೃಂದದ ಅಧಿಕಾರಿಗಳಿಗೆ 2016-17 ನೇ ಸಾಲಿನಲ್ಲಿ ಆನ್‌ಲೈನ್ ಗಣಕೀಕೃತ ವ್ಯವಸ್ಥೆಯ ಮೂಲಕ ಸಾರ್ವತ್ರಿಕ ವರ್ಗಾವಣೆ ಪ್ರಕ್ರೀಯೆ ನಡೆಸಲಾಗುತ್ತಿದೆ. ದಿನಾಂಕ:14-09-2016 ರಂದು ವರ್ಗಾವಣೆಗೆ ಅರ್ಹರಿರುವ ಅಧಿಕಾರಿಗಳ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯನ್ನು ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಸದರಿ ಪಟ್ಟಿಯಲ್ಲಿ ಹೆಸರಿರುವ ಅರ್ಹ ಅಧಿಕಾರಿಗಳಿಗೆ ಉಲ್ಲೇಖ (2) ರನ್ವಯ **ದಿನಾಂಕ: 20-09-2016** ರಂದು **ಘಟಕದೊಳಗಿನ ಕೋರಿಕೆಯ ವರ್ಗಾವಣೆ** ಮತ್ತು **23-09-2016** ರಂದು **ಘಟಕದ ಹೊರಗಿನ ಕೋರಿಕೆಯ ವರ್ಗಾವಣೆಗಳನ್ನು ನಡೆಸಲಾಗುವದು.**ನಿಮ್ಮ ಜಿಲ್ಲೆಯಿಂದ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿದ ಸರಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ಗ್ರುಪ್ ಬಿ ತತ್ಸಮಾನ ವೃಂದದ ಅಧಿಕಾರಿಗಳಿಗೆ ಸದರ ವರ್ಗಾವಣಾ ಕೌನ್ಸಿಲಿಂಗ್‌ಗೆ ಅವರು ಇಚ್ಛಿಸಿದ ಆದ್ಯತೆಯ ಅನುಸಾರ ಅವಶ್ಯಕ ಇರುವ ಮೂಲ ದಾಖಲೆಗಳೊಂದಿಗೆ ಹಾಜರಾಗುವಂತೆ ಸೂಚಿಸಲು ನಿಮಗೆ ಈ ಮೂಲಕ ನಿರ್ದೇಶಿಸಿದೆ.

(ವೀರಣ್ಣ ಜಿ. ತುರಮರಿ)
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಗೆ.

1) ಸಂಬಂಧಿಸಿದ ಉಪನಿರ್ದೇಶಕರುಗಳಿಗೆ ಮುಂದಿನ ತುರ್ತು ಕ್ರಮಕ್ಕಾಗಿ
2) ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ತುರ್ತು ಕ್ರಮಕ್ಕಾಗಿ